

ಲಂಡನ್‌ನಲ್ಲಿ ವಿಯೆಟ್ನಾಂ ಯುದ್ಧವಿರೋಧಿ ವಿದ್ಯಾರ್ಥಿಗಳ ಪ್ರತಿಭಟನೆ

ಅಲ್ಲಿಂದ ಮುಂದೆ ಅದು ನಮ್ಮೆಲ್ಲರ ಅಡ್ಡಹೆಸರಾಗಿ ಅಂಟಿಕೊಂಡಿತು.

◆ **ತಂದೆಯವರು ಏನು ಮಾಡುತ್ತಿದ್ದರು?**

ಅವರು ಪತ್ರಕರ್ತರಾಗಿದ್ದರು. ಅದಕ್ಕೂ ಮೊದಲು ಗುಜರಾತಿಗೆ ಬಂದು ಗುರುಕುಲದಲ್ಲಿ ಕಲಿತರು. ಗಾಂಧಿಯವರನ್ನು ಭೇಟಿ ಮಾಡಿದರು. 1933ರಲ್ಲಿ ನೈರೋಬಿಗೆ ಮರಳಿ ಬಂದು 'ಕಲೊನಿಯಲ್ ಟೈಮ್ಸ್ ಪ್ರಿಂಟಿಂಗ್ ಪ್ರೆಸ್' ಹಾಕಿದರು. 'ಕಲೋನಿಯಲ್ ಟೈಮ್ಸ್' ಪತ್ರಿಕೆ ಶುರುಮಾಡಿದರು. ಅದೊಂದು ದ್ವಿಭಾಷಿಕ ಪತ್ರಿಕೆ. ಅರ್ಧ ಇಂಗ್ಲಿಷು, ಅರ್ಧ ಗುಜರಾತಿ. ಆಫ್ರಿಕಾದಲ್ಲಿ ಗುಜರಾತಿ ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಪ್ರೆಸ್ಸಿನಲ್ಲಿ ಬೇರೆಬೇರೆ ಕಮರ್ಷಿಯಲ್ ಮುದ್ರಣಗಳು ನಡೆಯುತ್ತಿದ್ದವು. ಸ್ವಾಹಿಲಿ ಭಾಷೆಯ ಒಂದು ಪತ್ರಿಕೆಯೂ ಪ್ರಿಂಟ್ ಆಗುತ್ತಿತ್ತು. ಕೀನ್ಯಾ ಮತ್ತು ಭಾರತದ ನಡುವೆ 1958ರಲ್ಲಿ ನೇರ ವಿಮಾನ ಸಂಚಾರ ಆರಂಭವಾಯಿತು. ಅದನ್ನು ಜನಪ್ರಿಯಗೊಳಿಸಲು ಕೆಲವು ಪತ್ರಕರ್ತರಿಗೆ ಭಾರತ ಪ್ರವಾಸದ ಉಚಿತ ಆಫರ್ ಕೊಡಲಾಯಿತು. ಆಗ ಅಪ್ಪ ಭಾರತಕ್ಕೆ ಬಂದರು. ನೆಹರೂ ಮತ್ತು ಎಸ್. ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿದರು. ಅಪ್ಪನಿಗೆ ನೆಹರೂ 'ನೀವು ಭಾರತ ಮೂಲದವರು ಅಲ್ಲಿನ ಆಫ್ರಿಕನ್ ಹೋರಾಟಗಾರರನ್ನು ಬೆಂಬಲಿಸಬೇಕು' ಎಂದು ಹೇಳಿದರಂತೆ.

◆ **ಕೀನ್ಯಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ಮೂಲದವರ ಪಾತ್ರವೇನು?**

ಸ್ವಾಹಿಲಿಯಲ್ಲಿ 'ಉಹುರು' ಎಂದರೆ ಸ್ವಾತಂತ್ರ್ಯ. ಭಾರತೀಯ ಕೀನ್ಯನ್ ಸಮುದಾಯದ ಬಗ್ಗೆ ಡಾನಾ 'ಉಹುರು ಅಂಡ್ ಕೀನ್ಯನ್ ಇಂಡಿಯನ್ಸ್' ಪುಸ್ತಕ ಬರೆದಿದ್ದಾಳೆ. ಅದರಲ್ಲಿ ಕೀನ್ಯಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ಸಮುದಾಯದ ಚಿತ್ರಗಳಿವೆ. ಬ್ರಿಟಿಷರು ಭಾರತೀಯರಿಂದ ಪ್ರಯೋಜನ ಪಡೆಯುತ್ತಿದ್ದರು. ಆದರೆ, ಸ್ಥಳೀಯ ಆಫ್ರಿಕನ್ನರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು. ಭಾರತೀಯ ಮೂಲದ ಹೆಚ್ಚಿನವರು ಸ್ವಾತಂತ್ರ್ಯ ಹೋರಾಟದಲ್ಲಿ ಕೈಜೋಡಿಸಲಿಲ್ಲ. ಅಪ್ಪ ಮಾತ್ರ ಹೋರಾಟಗಾರರಿಗೆ